ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5, Special Issue-1, Sep-Oct, 2023, Pp 28-32.
©IIMRD, Mysuru.

IIMRD JOURNALS

www.iimrd.com

# ಕ್ರೈಸ್ತ ಮಿಷನರಿ ರೆವೆಂಡರ್.ಎಫ್.ಕಿಟೆಲ್ ಸಂಶೋಧನೆಯ ಬಹುಮುಖಿ ನೆಲೆಗಳು

**ಶ್ರೀಮತಿ ಗಾಯತ್ರಿ ಭಾವಿಕಟ್ಟಿ***

*ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪಳ.

***ಸಾರಾಂಶ: (Abstract)***

*ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಅಗ್ರಗಣ್ಯರಲ್ಲಿ ಒಬ್ಬರಾದ ರೆವೆಂಡರ್.ಎಫ್.ಕಿಟೆಲ್ ಕನ್ನಡಕ್ಕೆ ಶಾಶ್ವತ ಸ್ವರೂಪದ ಶಬ್ದಕೋಶವನ್ನು ಒದಗಿಸಿದವರೂ, ಹಳೆಗನ್ನಡ ಕೃತಿಗಳ ಗ್ರಂಥಸಂಪಾದನೆಗೆ ತಳಹದಿ ಹಾಕಿದವರೂ ಆಗಿದ್ದಾರೆ. ಅಲ್ಲದೇ ಸ್ವಯಂ ಕವಿಯೂ ಆಗಿದ್ದ ಕಿಟೆಲ್ ಅನುವಾದ, ಭಾರತೀಯ ತತ್ವಜ್ಞಾನ, ವ್ಯಾಕರಣಶಾಸ್ತ್ರ, ಧರ್ಮಶಾಸ್ತ್ರ, ಶಿಕ್ಷಣ, ಪಠ್ಯಪುಸ್ತಕ ರಚನೆ, ಭಾಷಾಧ್ಯಯನ–ವಿಶೇಷವಾಗಿ ದ್ರಾವಿಡ ಭಾಷಾಧ್ಯಯನ, ಛಂದಸ್ಸು, ಸಾಹಿತ್ಯ ಚರಿತ್ರೆ, ಪತ್ರಿಕೋದ್ಯಮ, ಗ್ರಂಥಸಂಪಾದನೆ, ನಿಘಂಟು ರಚನೆ–ಹೀಗೆ ಹಲವು ಕ್ಷೇತ್ರಗಳಲ್ಲಿ ತಮ್ಮ ಸಂಶೋಧನೆಯ ನೆಲೆಗಳನ್ನು ವಿಸ್ತರಿಸಿಕೊಂಡಿದ್ದಾರೆ. ಪ್ರಸ್ತುತ ಲೇಖನದಲ್ಲಿ ಕಿಟೆಲ್ ಅವರು ಗ್ರಂಥಸಂಪಾದನೆ, ವ್ಯಾಕರಣ ಮತ್ತು ನಿಘಂಟು ರಚನೆ ಈ ವಲಯಗಳಲ್ಲಿ ನಡೆಸಿದ ಸಂಶೋಧನೆಯನ್ನು ಮಾತ್ರ ಅವಲೋಕಿಸಲಾಗುತ್ತಿದೆ.*

***ಮುಖ್ಯಪದಗಳು (Keywords)*** *ರೆ.ಎಫ್.ಕಿಟೆಲ್, ಸಂಶೋಧನೆ, ನೆಲೆಗಳು, ಪ್ರವೃತ್ತಿ, ಸಾಹಿತ್ಯ, ಬಹುಮುಖಿ.*

## ಪೀಠಿಕೆ

ಕ್ರಿ.ಶ.1873ರಲ್ಲಿ ಕಿಟೆಲ್ ಸಾಹಿತ್ಯ ಜೀವನದಲ್ಲಿ ಮಹತ್ವ ಪೂರ್ಣವಾದುದ್ದು. ಆ ವರ್ಷ ಅವರು ಕೇಶಿರಾಜನ 'ಶಬ್ದಮಣಿದರ್ಪಣಂ'ವನ್ನು ಶಾಸ್ತ್ರೀಯವಾಗಿ ಸಂಪಾದಿಸಿ ಹೊರತಂದರು. ಅದನ್ನು ಒಂಬತ್ತು ಹಸ್ತಪ್ರತಿಗಳ ಆಧಾರದಿಂದ ಸಂಪಾದಿಸಿ ಅಲ್ಲಿಯ ಸೂತ್ರಗಳ ಸಾರಾಂಶವನ್ನು ಇಂಗ್ಲೀಷಿಗೆ ಭಾಷಾಂತರಿಸಿದರು. ಈ ಕೃತಿಯಲ್ಲಿ 26 ಪುಟಗಳ ಅತಿ ಉಪಯುಕ್ತ ಪ್ರಸ್ತಾವನೆಯಿದೆ. ಅದರಲ್ಲಿ ಕೇಶಿರಾಜ, ಅವನ ಕಾಲ, ಶಬ್ದಮಣಿ ದರ್ಪಣದ ಟೀಕಾಕಾರ, ತುಳು ಮತ್ತು ಬಡಗ ಭಾಷೆಗಳೊಡನೆ ಕನ್ನಡ ಭಾಷೆಯ ತುಲನೆ ಇತ್ಯಾದಿ ವಿಚಾರಗಳು ಪ್ರಸ್ತಾಪಿತವಾಗಿದ್ದು, ಗ್ರಂಥಸಂಪಾನೆಯಲ್ಲಿ ಅದೊಂದು ಅಪೂರ್ವ ಹಾಗೂ ಮಾರ್ಗದರ್ಶಿ ಕೃತಿಯಾಗಿದೆ. ಅದು ಪ್ರಕಟಗೊಂಡ ಬಳಿಕ ಕಿಟೆಲ್ಲರು ಎಲ್ಲಾ ವಿದ್ವಾಂಸರ ಮನ್ನಣೆಗೆ ಪಾತ್ರರಾದರು.

ಕಿಟೆಲ್ ಅವರ ಮತ್ತೊಂದು ಮಹತ್ವದ ಗ್ರಂಥ ಸಂಪಾದನೆಯೆಂದರೆ ನಾಗವರ್ಮನ 'ಛಂದೋಂಬುಧಿ'. 1875ರಲ್ಲಿ 14 ಹಸ್ತಪ್ರತಿಗಳ ನೆರವಿನಿಂದ ನಾಗವರ್ಮನ 'ಛಂದೋಂಬುಧಿ'ಯನ್ನು

*Please cite this article as:* ಶ್ರೀಮತಿ ಗಾಯತ್ರಿ ಭಾವಿಕಟ್ಟಿ. (2023). ಕ್ರೈಸ್ತ ಮಿಷನರಿ ರೆವೆಂಡರ್.ಎಫ್.ಕಿಟೆಲ್ ಸಂಶೋಧನೆಯ ಬಹುಮುಖಿ ನೆಲೆಗಳು ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(1). ಪು.ಸಂ.28–32.*

ಸಂಪಾದಿಸಿ ಮಂಗಳೂರು ಬಾಸೆಲ್ ಮಿಶನ್ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಕಟಿಸಿದರು. ಈ ಪ್ರಕಟಣೆಯ ಇನ್ನೊಂದು ಹೆಚ್ಚಳವೆಂದರೆ ಅದರ ಮುನ್ನುಡಿ. ಅದರಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ಕುರಿತು 'Essay on Canarese Literature' ಎಂಬ ದೀರ್ಘ ಪ್ರಬಂಧ ಬರೆದಿದ್ದಾರೆ. "ಕನ್ನಡದಲ್ಲಿ ವೈಜ್ಞಾನಿಕ ರೀತಿಯ ಗ್ರಂಥಸಂಪಾದನೆ ಕಿಟೆಲ್ ಅವರಿಂದಲೇ ಆರಂಭವಾದುದರಿಂದ ಅವರೇ ಈ ಕ್ಷೇತ್ರದ ಪಿತಾಮಹರು" ಎಂದು ವಿಲ್ಯಂ ಮಾಡ್ತಾ ಅವರು ಅಭಿಪ್ರಾಯಪಟ್ಟಿದ್ದಾರೆ. *(ಸಾಲುದೀಪಗಳು, ಪುಟ-03, ಕರ್ನಾಟಕ ಸಾಹಿತ್ಯ ಅಕಾಡೆಮಿ, 2016).*

**ವೈಯಾಕರಣಿಯಾಗಿ ಕಿಟೆಲ್**

ಕಿಟೆಲ್ ಒಬ್ಬ ವ್ಯಾಕರಣಕಾರರೂ ಹೌದು. ಕವಿತೆ, ಅನುವಾದ ಲೇಖನಗಳನ್ನು ಬರೆದಾಗಲೂ ಅವರ ಪ್ರಧಾನ ಆಸಕ್ತಿ ವ್ಯಾಕರಣ ಮತ್ತು ಭಾಷೆಯ ಕಡೆಗಿತ್ತು. ಪಠ್ಯಪುಸ್ತಕ ನಿರ್ಮಾಣದ ಭಾಗವಾಗಿ ಕಿಟೆಲ್ ಅವರು 'ಶಾಲಾ ವ್ಯಾಕರಣ'ವನ್ನು ರೂಪಿಸಿದ್ದರು. ಮುಂದೆ 1865ರಲ್ಲಿ 'ಸಂಕ್ಷೇಪ ವ್ಯಾಕರಣ' ಎಂಬ ಕನ್ನಡ ವ್ಯಾಕರಣವನ್ನು ಪ್ರಕಟಿಸಿ, ಆ ಬಳಿಕ ಅದನ್ನು ಪರಿಷ್ಕರಿಸಿ 'ಹಳೆಗನ್ನಡ ಸಂಕ್ಷೇಪ ವ್ಯಾಕರಣ ಸೂತ್ರಗಳು' ಎಂಬುದಾಗಿ 1866ರಲ್ಲಿ ಬೆಳಕಿಗೆ ತಂದರು. 1868ರಲ್ಲಿ 'ಕರ್ನಾಟಕ ವಾಗ್ವಿಧಾಯಿನಿ' ಎಂಬ ಸಾಹಿತ್ಯ ಪತ್ರಿಕೆಯಲ್ಲಿ ರೈಸ್, ಸಾಂಡರ್ಸನ್ ಮೊದಲಾದವರೊಡನೆ ಸೇರಿಕೊಂಡು 'ಕನ್ನಡ ವ್ಯಾಕರಣ'ವನ್ನು ಧಾರವಾವಾಹಿಯಾಗಿ ಪ್ರಕಟಿಸಿದ್ದಾರೆ. ಕ್ರಿ.ಶ.1873ರಲ್ಲಿ ಕಿಟೆಲ್ 'ಶಬ್ದಮಣಿದರ್ಪಣ'ವನ್ನು ಶಾಸ್ತ್ರೀಯವಾಗಿ ಸಂಪಾದಿಸಿ ಹೊರತಂದರು. ಕಿಟೆಲ್ ಅವರ ಶಬ್ದಕೋಶ, ವ್ಯಾಕರಣ ಅಧ್ಯಯನ, ಸಂಶೋಧನೆಗಳಿಗೆ ಶಬ್ದಮಣಿದರ್ಪಣ ತಾಯಿಬೇರಿನಂತಿದೆ. ಹಿಂದೆ ಹೇಳಿದ ಅವರ 'ಹಳೆಗನ್ನಡ ಸಂಕ್ಷೇಪ ವ್ಯಾಕರಣ ಸೂತ್ರಗಳು' ಕೃತಿಯು ಕೇಶಿರಾಜನ ಶಬ್ದಮಣಿದರ್ಪಣದ ಸಾರವೇ ಆಗಿದೆ.

ಕಿಟೆಲ್ ಅವರ ಮಹತ್ತರವಾದ ವ್ಯಾಕರಣ ಕೃತಿ 'A Grammar of the Kannada language' 1903ರಲ್ಲಿ ಬಾಸೆಲ್ ಮಿಶನ್ ಮುದ್ರಣಾಲಯದಲ್ಲಿ ಅಚ್ಚಾಗಿ ಪ್ರಕಟವಾಯಿತು. ಇದು 483 ಪುಟದ 28 ಅಧ್ಯಾಯಗಳ ಬೃಹತ್ ಕನ್ನಡ ವ್ಯಾಕರಣ ಗ್ರಂಥ. ಈ ಕೃತಿಯಲ್ಲಿ ಕಿಟೆಲ್ ಹಳೆಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರು ಘಟ್ಟಗಳಲ್ಲಿ ವ್ಯಾಕರಣ ನಿಯಮಗಳು ಅದು ಹೇಗೆ ಮಾರ್ಪಟ್ಟಿದೆಯೆಂಬುದನ್ನು ಅಸಂಖ್ಯೆ ಉದಾಹರಣೆಗಳೊಂದಿಗೆ ತೋರಿಸಿದ್ದಾರೆ. ಸಾಧಿತ ರೂಪಗಳ ಪ್ರಾದೇಶಿಕ ಬೇಧಗಳನ್ನು ಗುರುತಿಸಿದ್ದಾರೆ. ದ್ರಾವಿಡ ಭಾಷಾ ವಿಚಾರಗಳೂ ತೌಲನಿಕವಾಗಿ ವ್ಯಕ್ತವಾಗಿವೆ. ಅಲ್ಲಲ್ಲಿ ಕಿಟೆಲ್‌ರವರ ಸ್ವತಂತ್ರ ವಿಚಾರಣ ಸರಣಿಯನ್ನು ಕಾಣುತ್ತೇವೆ.

**ಕಿಟೆಲ್ ಅವರ 'ಕನ್ನಡ–ಇಂಗ್ಲೀಷ್ ಶಬ್ದಕೋಶ'**

ಕಿಟೆಲ್ ಅವರ ಸಂಶೋಧನಾ ಪ್ರವೃತ್ತಿಗೆ ಮತ್ತು ಸತತ ಅಧ್ಯಯನಕ್ಕೆ ಸಾಕ್ಷಿಯಾಗಿರುವುದು ಅವರ 'ಕನ್ನಡ–ಇಂಗ್ಲೀಷ್ ಶಬ್ದಕೋಶ'. ಕಿಟೆಲ್‌ರ ಕನ್ನಡ ಭಾಷಾ ಪ್ರಭುತ್ವ ಹಾಗೂ ವಿದ್ವತ್ತನ್ನು ಗಮನಿಸಿ ಕ್ರಿ.ಶ.1871ರ ವೇಳೆಗೆ ಬಾಸೆಲ್ ಮಿಶನ್ ಸಂಸ್ಥೆಯು ಬ್ರಿಟಿಷ್ ಸರಕಾರದ ಆರ್ಥಿಕ ನೆರವನ್ನು ಪಡೆದು, ಅವರನ್ನು 'ಕನ್ನಡ–ಇಂಗ್ಲೀಷ್ ನಿಘಂಟ'ನ್ನು ರಚಿಸಲು ನಿಯುಕ್ತಿಗೊಳಿಸಿತು. ಬ್ರಿಟಿಷ್ ಅಧಿಕಾರಿಯಿಂದ ಕಿಟೆಲ್ ಅವರಿಗೆ ಸೂಚನೆಯೊಂದು ಬಂದಿತು. ಅದರಲ್ಲಿ ಉತ್ತರ ಕರ್ನಾಟಕದ ಆಡುನುಡಿಗೂ ತುಂಗಭದ್ರೆಯ

ಕೆಳಗಿನ ಕರ್ನಾಟಕದ ಆಡುನುಡಿಗೂ ಸಾಕಷ್ಟು ವ್ಯತ್ಯಾಸವಿದೆ. ಈ ನಿಘಂಟಿನಲ್ಲಿ ಉತ್ತರ ಕರ್ನಾಟಕದ ಜನಭಾಷೆಗೆ ಸೂಕ್ತ ಮನ್ನಣೆ ನೀಡಬೇಕೆಂದು ಒತ್ತಾಯಿಸಲಾಗಿತ್ತು. ಅದಕ್ಕೆ ಪ್ರತಿಕ್ರಿಯಿಸಿದ ಕಿಟೆಲರು "ಸಾಮಾನ್ಯವಾಗಿ ಇಂಗ್ಲೀಷ್ ನಿಘಂಟುಗಳಲ್ಲಿ ಸ್ಥಳೀಯ ಆಡುಮಾತಿನ ಪದಗಳಿಗೆ ಅವಕಾಶವಿಲ್ಲ. ಆದರೆ ನಾನು ಕನ್ನಡ ನಿಘಂಟಿನಲ್ಲಿ ಮೊದಲ ಬಾರಿಗೆ ಆಡುಮಾತಿಗೆ ಒತ್ತು ನೀಡುವುದಲ್ಲದೆ ದಕ್ಷಿಣ-ಉತ್ತರ ಕರ್ನಾಟಕದ ಎಲ್ಲಾ ಭಾಗಗಳ ಪದಕೋಶಗಳಿಗೆ ತಾನು ರಚಿಸುವ ನಿಘಂಟಿನೊಳಗೆ ಸ್ಥಾನ ನೀಡುವುದಾಗಿ ಬರೆದರು. ಕನ್ನಡ ಪ್ರಾದೇಶಿಕ ಭಿನ್ನ ಸ್ವರೂಪವನ್ನು ಒಪ್ಪಿಕೊಂಡು ಕನ್ನಡದ ಹಳೆಗನ್ನಡ, ನಡುಗನ್ನಡ, ಹೊಸಗನ್ನಡ ಗ್ರಂಥಗಳ ಸ್ವರೂಪದಲ್ಲಿ ದಕ್ಷಿಣ-ಉತ್ತರ ಎಂಬ ಭೇದ ಅಷ್ಟಾಗಿ ಇಲ್ಲ" ಎಂದು ಹೇಳಿದ ಕಿಟೆಲ್ ಲಿಖಿತರೂಪದ ಕನ್ನಡದ ಸಮಷ್ಠಿ ರೂಪವನ್ನು ಬ್ರಿಟಿಷ್ ಅಧಿಕಾರಿಗಳಿಗೆ ತಿಳಿಸಿದರು. *(ಶಬ್ದಾರ್ಥ ವಿಹಾರಿ ಕಿಟೆಲ್, Prajavani.net)*

ಕಿಟೆಲ್ ಅವರ ಈ ಮೇಲಿನ ಅಭಿಪ್ರಾಯದಿಂದ ಆಧುನಿಕ ಭಾಷಾ ವಿಜ್ಞಾನವು ಪ್ರತಿಪಾದಿಸುವ ಆಡುಮಾತಿನ ರೂಪವೇ ಅಧಿಕೃತ ಎಂಬ ನಿಲುವು ಕಿಟೆಲ್‌ರಿಗೆ ಆಗಲೇ ಮನವರಿಕೆಯಾಗಿತ್ತು ಎಂದು ತಿಳಿದು ಬಂದಿರುತ್ತದೆ. ಈ ನಿಘಂಟು ರಚನಾ ಕಾರ್ಯವನ್ನು ಆರಂಭಿಸಲು ಕಿಟೆಲ್‌ರಿಗೆ ಗುಂಡರ್ಟ್‌ನ್ ಮಲಯಾಳಿ ಶಬ್ದಕೋಶದ ಮಾದರಿ ಹೇಗೋಯಿದ್ದಿತು. ಮೊದಲಿಗೆ ಸುಮಾರು 36 ಹಳೆಗನ್ನಡ ಕೃತಿಗಳನ್ನು ಪರಿಶೀಲಿಸಿ ಅದರಲ್ಲಿಯು ಅನೇಕಾನೇಕ ಶಬ್ದಗಳನ್ನು, ಅವುಗಳ ಪ್ರಯೋಗ ಸಹಿತವಾಗಿ ಬರೆದು ತೆಗೆದರು. ಜೊತೆಗೆ ರೀವ್ ಕೊಟ್ಟಿದ್ದ ಎಲ್ಲಾ ಶಬ್ದಗಳನ್ನು, ಬೇರೆ ಕನ್ನಡ ಕೋಶಗಳಲ್ಲಿರುವ ಶಬ್ದಗಳನ್ನು, ಸಂಕಲಿಸಿದರು. ಈ ಹಿಂದೆ ಸ್ವಂತವಾಗಿ ಸಂಗ್ರಹಿಸಿದ ಪದಗಳನ್ನು ಸೇರಿಸಿದರು. ಕ್ರಿ.ಶ.1882ರಲ್ಲಿ ಕಿಟೆಲ್ ಧಾರವಾಡಕ್ಕೆ ಬಂದು ನಿಘಂಟು ಕಾರ್ಯವನ್ನು ಮುಂದುವರೆಸಿದರು. ಆ ವೇಳೆ ಸಹೋದ್ಯೋಗಿಯಾದ ಜ್ರಿಗ್ಲರ್ ಮತ್ತು ಹುಬ್ಬಳ್ಳಿಯಲ್ಲಿ ಶಾಲಾ ಶಿಕ್ಷಕರಾದ ವಸ್ತ್ರದ ಶಿವಲಿಂಗಯ್ಯ ಇವರು ಉತ್ತರ ಕರ್ನಾಟಕದ ಅನೇಕ ಶಬ್ದಗಳ ಪಟ್ಟಿಯನ್ನು ಪೂರೈಸಿದರು. ಅಲ್ಲದೇ ಕಿಟೆಲ್ ಗ್ರಾಮೀಣ ಜನರ ನೆರವನ್ನು ಧಾರಾಳವಾಗಿ ಪಡೆದರು.

ಕನ್ನಡದ ಪ್ರಸಿದ್ಧ ಗ್ರಂಥಗಳಲ್ಲಿ, ಗಾದೆ ಮಾತುಗಳಲ್ಲಿ ಬರುವ ಪದಗಳನ್ನು, ಅವುಗಳ ಅರ್ಥಗಳನ್ನು ಸಂಗ್ರಹಿಸಿ ಪ್ರತಿ ಶಬ್ಧದ ಉಚ್ಛಾರಣೆಯನ್ನು ಇಂಗ್ಲೀಷಿನಲ್ಲಿ ನಮೂದಿಸಿದರು. ಶಬ್ಧ ಸಂಗ್ರಹದಲ್ಲಿ ಯಾರೇ ನೆರವಾಗಿರಲಿ ಅವುಗಳ ಅರ್ಥನಿರ್ಣಯ, ಪ್ರಯೋಗಗಳು, ವ್ಯುತ್ಪತ್ತಿ, ದ್ರಾವಿಡ ಸಮಾನಪದ ಸೂಚನೆ ಮುಂತಾದ ಅಂಶಗಳು ಕಿಟೆಲ್‌ರಿಂದಲೇ ನಿರ್ಣೀತವಾಗಿದ್ದವು. ಹೀಗೆ ಸತತ ಅಧ್ಯಯನ, ಕ್ಷೇತ್ರಕಾರ್ಯ ಮುಗಿದು ಹಸ್ತಪ್ರತಿಯು ಸಿದ್ಧವಾಗಲು 15 ವರ್ಷಗಳು ಹಿಡಿದವು. ಮುಂದೆ ಕ್ರಿ.ಶ.1889ರಲ್ಲಿ ಅನೇಕ ವಿದ್ವಾಂಸರೊಂದಿಗೆ ವಿಚಾರ ವಿನಿಮಯ ನಡೆಸಿ 'ಕನ್ನಡ-ಇಂಗ್ಲೀಷ್ ಶಬ್ದಕೋಶ'ದ ಹಸ್ತಪ್ರತಿಯನ್ನು ಮುದ್ರಣಕ್ಕಾಗಿ ಮಂಗಳೂರಿನ ಬಾಸೆಲ್ ಮಿಶನ್ ಪ್ರೆಸ್ಸಿಗೆ ಒಪ್ಪಿಸಿದರು. ಈ ಮಧ್ಯೆ ಕಣ್ಣುನೋವು ಮತ್ತು ತಲೆನೋವುಗಳಿಂದ ನರಳುತ್ತಿದ್ದ ಕಿಟೆಲ್ ತಮ್ಮ ಹುಟ್ಟೂರಿನಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗಲೇ ಶಬ್ದಕೋಶ ಪರಿವೀಕ್ಷಣಾ ಕಾರ್ಯವನ್ನು ಮಾಡಿದ್ದರಲ್ಲದೆ ಬಹು ಉಪಯುಕ್ತ ಮುನ್ನುಡಿಯನ್ನು ಬರೆದು ಕ್ರಿ.ಶ.1893ರಲ್ಲಿ ಕಳುಹಿಸಿದರು. ಕ್ರಿ.ಶ.1894ರಲ್ಲಿ ಕಿಟೆಲ್ ಜೀವಮಾನ ಸಾಧನೆಯ ಪ್ರತಿರೂಪವಾದ **'ಕನ್ನಡ-ಇಂಗ್ಲೀಷ್ ಶಬ್ದಕೋಶ'**ವು ಬೆಳಕನ್ನು ಕಂಡಿತು. ಕಿಟೆಲ್‌ರ ಈ 'ಕನ್ನಡ-ಇಂಗ್ಲೀಷ ಶಬ್ದಕೋಶ'ವು ಕನ್ನಡ ಹಾಗೂ ಭಾರತೀಯ ಭಾಷೆಗಳಲ್ಲೇ ಅತ್ಯಂತ ಪ್ರಮಾಣ ಬದ್ಧವಾದ ಹಾಗೂ ವೈಜ್ಞಾನಿಕ ಪದ್ಧತಿಯನ್ನೊಳಗೊಂಡ ಸರ್ವ ಸಂಗ್ರಾಹಕ

ವಿವರಣಾತ್ಮಕ ಶಬ್ದಕೋಶವಾಗಿದೆ. ಈ ಮೇರುಕೃತಿಯಲ್ಲಿ 1762 ಬೃಹತ್ ಗಾತ್ರದ ಪುಟಗಳಿವೆಯಲ್ಲದೆ ಸುಮಾರು 70,000 ಶಬ್ದಗಳನ್ನು ಅದು ಒಳಗೊಂಡಿದೆ. ಈ ಕೋಶದ ಪುಟ ಪುಟಗಳಲ್ಲಿ ಕಿಟೆಲ್‌ರ ಅಪಾರ ವಿದ್ವತ್ತು ಪುಟಿದು ಕಾಣುತ್ತದೆ. ಇದರಲ್ಲಿ ಅಡಕವಾಗಿರುವ ಅಪಾರವಾದ ಶಬ್ದಸಂಪತ್ತು, ಕನ್ನಡದ ವಿವಿಧ ಪ್ರಾದೇಶಿಕ ಹಾಗೂ ಸಾಮಾಜಿಕ ಉಪಭಾಷೆಗಳ ಮಾತುಗಳು, ಗಾದೆ, ನಾಣ್ನುಡಿಗಳು, ಹಳೆಗನ್ನಡ, ಹೊಸಗನ್ನಡ ಪ್ರಯೋಗಗಳು ಕಿಟೆಲ್‌ರ ಪರಿಶ್ರಮ, ಕರ್ತವ್ಯ ನಿಷ್ಠೆ, ಅಚ್ಚುಕಟ್ಟುತನ, ವೈಜ್ಞಾನಿಕತೆ, ವಿದ್ವತ್ತುಗಳೆಲ್ಲವನ್ನು ಪ್ರತಿಬಿಂಬಿಸುತ್ತವೆ. ಈ ನಿಘಂಟಿನ ಇನ್ನೊಂದು ವಿಶೇಷವೆಂದರೆ ಕನ್ನಡ ಪದಗಳಿಗೆ ಸಂವಾದಿಯಾಗಿ ಇತರ ದ್ರಾವಿಡ ಭಾಷೆಗಳ ಪದಗಳನ್ನು ಸೂಚಿಸಿರುವುದಲ್ಲದೆ, ಸಂಸ್ಕೃತ ಮತ್ತು ತದ್ಭವ ಪದಗಳಿಗೆ ಅರ್ಥವನ್ನು ಕೊಟ್ಟಿದೆ. ಆ ಮೂಲಕ ಕನ್ನಡ ನಾಡಿನ ಸಾಮಾಜಿಕ ಕೋಶವೂ ಆಗಿದೆ ಮತ್ತು ಈ ಕೋಶವು ಪ್ರಕಟವಾದ ಎರಡು ವರ್ಷಗಳಲ್ಲಿ ಜರ್ಮನಿಯ ತೀಬೆಂಜನ್ ವಿಶ್ವವಿದ್ಯಾಲಯವು ಕ್ರಿ.ಶ.1896ರಲ್ಲಿ ರೆ.ಎಫ್.ಕಿಟೆಲ್ ಅವರಿಗೆ 'ಡಾಕ್ಟರ್ ಆಫ್ ಫಿಲಾಸಫಿ' ಎಂಬ ಗೌರವ ಪದವಿಯನ್ನು ನೀಡಿ ಗೌರವಿಸಿತು.

ಕಿಟೆಲ್ ಕೋಶದ ಒಂದು ಪದದ ಅರ್ಥಸ್ವರೂಪವನ್ನು ಇಲ್ಲಿ ಉದಾಹರಣೆಯಾಗಿ ನೋಡಬಹುದು. 'ಗುಗ್ಗರಿ' ಎನ್ನುವ ಪದದ ಅರ್ಥವನ್ನು ಶ್ರೀವತ್ಸ ಜೋಶಿ ಅವರು ತಮ್ಮ 'ಕಿಟೆಲ್ ಕೋಶಕ್ಕೂ ತಿಂಡಿಬೇಕು, ತೀರ್ಥಬೇಕು ಎಲ್ಲ ಬೇಕು" (Vishvavani.News) ಎನ್ನುವ ಲೇಖನದಲ್ಲಿ ಚರ್ಚಿಸಿದ್ದಾರೆ. ಕಿಟೆಲ್ ಕೋಶದ 546ನೇ ಪುಟದಲ್ಲಿ 'ಗುಗ್ಗರಿ' ಎಂಬ ಪದದ ಅರ್ಥವನ್ನು ಕಿಟೆಲ್ ಹೀಗೆ ಕೊಟ್ಟಿದ್ದಾರೆ. ವಿವಿಧ ಧ್ಯಾನ್ಯಗಳಿಂದ ತಯಾರಿಸುವ ಗುಗ್ಗರಿ (ಗುಗ್ಗುರಿ) ಪದದ ಮೊದಲು ಅರ್ಥವನ್ನು Grain boiled whole or half dressed, and seasoned ಎಂದಿದೆ. ಅಲ್ಲದೇ ತೆಲುಗಿನಲ್ಲಿ 'ಗುಗ್ಗಿಳ್ಳು', ಮರಾಠಿಯಲ್ಲಿ 'ಘುಗರೀ', ತಮಿಳಿನಲ್ಲಿ 'ಸುಂಡಲ್' ಸಮಾನಾರ್ಥಕ ಪದಗಳೆಂದು ನಮೂದಿಸಿದ್ದಾರೆ. ಮಗುವಿಗೆ ಹೆಸರಿಡುವ ಸಂದರ್ಭದಲ್ಲಿ 'ಗುಗ್ಗರಿ' ಮಾಡುತ್ತಾರೆ ಎಂಬ ವಿಚಾರವೂ ಕಿಟೆಲ್‌ಗೆ ಗೊತ್ತಿದೆ. 'ಬಂಧು ಬಳಗವು ಕೂಡಿ ಹೊಂದಿ ಜೋಗುಳ ಹಾಡಿ ಹಿಂದೆ ಸತ್ತವರ ಹೆಸರಿಟ್ಟು ಗುಗ್ಗರಿ ತಿಂದು ಕೂಸಂ ತೂಗುವರು' ಎಂಬ ಸರ್ವಜ್ಞನ ವಚನವೊಂದನ್ನು ದಾಖಲಿಸಿದ್ದಾರೆ.

ಗುಗ್ಗರಿ ಪದದ ಎರಡನೇ ಅರ್ಥ "ರೋಮಾಂಚನ, ರೋಮಹರ್ಷಣ, ಮೈಕೂದಲೆಲ್ಲ ನಿಮಿರುವುದು ಅಂದರೆ ಗುಗ್ಗರಿಸಿಕೊಳ್ಳುವುದು' ಎಂದು ಕಿಟೆಲ್ ವಿವರಿಸುತ್ತಾರೆ. ಮೂರನೇ ಅರ್ಥವೂ ಸ್ವಾರಸ್ಯಕರವಾಗಿದೆ 'ಗುಗ್ಗರಿಗೋಲು' ಅಂತ ಶಿಕ್ಷೆಯ ವಿಧಾನವಂತೆ. ಶಾಲೆಯಲಿ ಗಂಡು ಮಕ್ಕಳಿಗೆ ಆ ಶಿಕ್ಷೆ ವಿಧಿಸುವುದು ಆ ಕಾಲದಲ್ಲಿ ಸಾಮಾನ್ಯವಂತೆ. ನೆಲದ ಮೇಲೆ ಕುಳಿತುಕೊಂಡ ಭಂಗಿಯಲ್ಲಿ ಕೈಗಳೆರಡನ್ನು ಕಾಲುಗಳ ನಡುವಿಂದ ಮೊಣಕಾಲಿನ ಮೇಲಕ್ಕೆ ತಂದು ಕಟ್ಟುವುದು. ಆ ಗಂಟಿನ ಕೆಳಗೆ ಒಂದು ಚಿಕ್ಕ ಕೋಲನ್ನು ಮೊಣಕಾಲುಗಳಿಗೆ ತಾಗುವಂತೆ ಇಡುವುದು. ಒಟ್ಟಿನಲ್ಲಿ ಅತ್ತಿಂದಿತ್ತ ಅಲ್ಲಾಡದಂತೆ ಮಾಡುವುದು. ಹೀಗೆ ಒಂದು ಪದದ ವಿವಿಧ ಅರ್ಥಗಳು ಒಂದು ಸಮುದಾಯದ ಸಾಂಸ್ಕೃತಿ ಸಂಗತಿಗಳನ್ನು ಕಟ್ಟಿಕೊಡುವುದನ್ನು ಈ ಒಂದು ಉದಾಹರಣೆಯ ಮೂಲಕ ಗ್ರಹಿಸಬಹುದು. ಅಲ್ಲದೇ ಇದು ಕಿಟೆಲ್ ಅವರ ಸಮಗ್ರ ದೃಷ್ಟಿಗೆ ಸಾಕ್ಷಿಯಾಗಿದೆ.

ಈ ರೀತಿಯಾಗಿ ರೆ.ಎಫ್.ಕಿಟೆಲ್ ಮತಪ್ರಸಾರದ ಕಾರಣದಿಂದ ಕನ್ನಡ ಕಲಿಕೆ ಆರಂಭಿಸಿದರೂ ಮುಂದೆ ಕನ್ನಡ ವ್ಯಾಕರಣ, ಗ್ರಂಥ ಸಂಪಾದನೆ, ಸಾಹಿತ್ಯ ಚರಿತ್ರೆ, ಪಠ್ಯಪುಸ್ತಕ, ನಿಘಂಟು ರಚನೆ, ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಸಂಶೋಧನೆಯನ್ನು ಕೈಗೊಂಡು ಕನ್ನಡ ಭಾಷೆ ಹಾಗೂ ಸಾಹಿತ್ಯಕ್ಕೆ ಅಪಾರವಾದ ಕೊಡುಗೆಯನ್ನು ಕೊಟ್ಟಿದ್ದಾರೆ. ಈ ಮೂಲಕ ಕನ್ನಡಿಗರ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿ ನೆಲೆಗೊಂಡಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಡಾ.ಶ್ರೀನಿವಾಸ ಹಾವನೂರ, (2000). ಹೊಸಗನ್ನಡದ ಅರುಣೋದಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
- ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ (ಸಂ), ಪ್ರೊ. ಎಂ. ಹೆಚ್. ಕೃಷ್ಣಯ್ಯ, (2016). ಸಾಲುದೀಪಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಬೆಂಗಳೂರು.


**ಲೇಖನಗಳು**


3.1. ಮೈಸೂರು ವಿಶ್ವವಿದ್ಯಾನಿಲಯ ವಿಶ್ವಕೋಶ/ಕಿಟೆಲ್ ಫರ್ಡಿನಾಂಡ್, kn.m.wikisource.org

3.2. ಫರ್ಡಿನೆಂಡ್ ಕಿಟಲ್–ಕಣಜ, ಅಂತರ್ಜಾಲ ಕನ್ನಡ ಜ್ಞಾನಕೋಶ.

3.3. ಶ್ರೀವತ್ಸ ಜೋಶಿ, ಕಿಟೆಲ್ ಕೋಶಕ್ಕೂ ತಿಂಡಿಬೇಕು ತೀರ್ಥ ಬೇಕು ಎಲ್ಲ ಬೇಕು, Vishvani.news.